ಉದಯವಾಣಿ 11-1-2015
UDAYAVANI - MANIPAL

# ಅಡಿಕೆ, ರಬ್ಬರ್ ಬೆಳೆಗಾರರ ರಕ್ಷಣೆಗೆ ಸರಕಾರ ಬದ್ಧ: ಡಿವಿ

ವಿಟ್ಲ, ಜ. 10: ಕೇಂದ್ರ ಸರಕಾರ ಅಡಿಕೆ ಮತ್ತು ರಬ್ಬರ್ ಬೆಳೆಗಾರರ ಸಂರಕ್ಷಣೆಗೆ ಬದ್ಧವಾಗಿದೆ. ಅಡಿಕೆ ಬೆಲೆ ಸ್ಥಿರೀಕರಣಕ್ಕೆ ಬಜೆಟ್‌ನಲ್ಲಿ ವಿಶೇಷ ಅನುದಾನ ಕಾಯ್ದಿರಿಸಿದೆ. ಆಹಾರೋತ್ಪನ್ನಗಳ ಬೆಲೆ ಕುಸಿದಾಗ ಕಂಗಾಲಾದ ರೈತರಿಗೆ ಸರಕಾರ ಮಧ್ಯ ಪ್ರವೇಶಿಸುವಂತೆ ವಾಣಿಜ್ಯ ಬೆಳೆಗಳ ಬೆಲೆ ಸ್ಥಿರೀಕರಣಕ್ಕೆ ಅನುದಾನ ಕಾಯ್ದಿರಿಸಲಾಗಿದೆ. ಅಡಿಕೆ ಬೆಳೆಗಾರರು ಆತ್ಮಹತ್ಯೆಯಂಥ ಪ್ರಕ್ರಿಯೆಗೆ ಮನಮಾಡಬಾರದು ಎಂಬ ದೃಷ್ಟಿಯಿಂದ ಈ ಕ್ರಮಕೈಗೊಳ್ಳಲಾಗಿದೆ ಎಂದು ಕೇಂದ್ರ ಕಾನೂನು ಸಚಿವ ಡಿ.ವಿ. ಸದಾನಂದ ಗೌಡ ಹೇಳಿದರು.

ಅವರು ಶನಿವಾರ ವಿಟ್ಲ ಕೇಂದ್ರಿಯ ತೋಟದ ಬೆಳೆಗಳ ಸಂಶೋಧನ ಸಂಸ್ಥೆ (ಸಿಪಿಸಿಆರ್‌ಐ) ಯಲ್ಲಿ ನಡೆದ ಕೃಷಿ ಮೇಳ 2015 ಉದ್ಘಾಟಿಸಿ ಮಾತನಾಡಿದರು.

ವಿದೇಶಗಳಿಂದ ಅಡಿಕೆ ಆಮದಾಗುವುದನ್ನು ತಡೆಹಿಡಿಯಲಾಗಿದೆ. ಮಲೇಶ್ಯಾ ಮೊದಲಾದ ವಿದೇಶಗಳಿಂದ ಆಗಮಿಸುತ್ತಿದ್ದ ಕಡಿಮೆ ಬೆಲೆಯ ಕಳಪೆ ಅಡಿಕೆಗೆ ಆಮದು ಸುಂಕ ಹೆಚ್ಚಿಸಲಾಗಿದೆ. ಬೆಳೆಗಾರರು ಯೋಚಿಸಬೇಕಾಗಿಲ್ಲ, 275 ರೂ.ಗಳ ಧಾರಣೆ ಸ್ಥಿರವಾಗಿ ಉಳಿಯುವಂತೆ ಪ್ರಯತ್ನ ಮಾಡಲಾಗಿದೆ ಎಂದು ಅವರು ಹೇಳಿದರು.

ಪುತ್ತೂರು ಶಾಸಕಿ ಶಕುಂತಳಾ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕ್ಯಾಂಪ್ಕೋ ಅಧ್ಯಕ್ಷ ಕೊಂಕೋಡಿ ಪದ್ಮನಾಭ, ದ. ಕ. ಜಿ. ಪಂ. ಅಧ್ಯಕ್ಷೆ ಆಶಾ ತಿಮ್ಮಪ್ಪ, ನಿಕಟಪೂರ್ವ ಅಧ್ಯಕ್ಷೆ ಹಾಲಿ ಸದಸ್ಯೆ ಶೈಲಜಾ ಕೆ.ಟಿ. ಭಟ್, ವಿಟ್ಲ ಗ್ರಾ. ಪಂ. ಅಧ್ಯಕ್ಷೆ ಭವಾನಿ ರೈ ಕೊಲ್ಯ, ಶಿವಮೊಗ್ಗ ಮ್ಯಾಮ್ಕೋಸ್ ಉಪಾಧ್ಯಕ್ಷ ನರಸಿಂಹ ನಾಯಕ್, ಕೊಚ್ಚಿ ಗೇರು ಮತ್ತು ಕೊಕ್ಕೋ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಡಾ| ವೆಂಕಟೇಶ್ ಎನ್ ಹುಬ್ಬಳ್ಳಿ, ಅಡಿಕೆ ಪತ್ರಿಕೆ ಸಂಪಾದಕ ಶ್ರೀ ಪಡ್ರೆ, ಅಖಿಲ ಭಾರತ ಅಡಿಕೆ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಮಂಚಿ ಶ್ರೀನಿವಾಸ ಆಚಾರ್, ಕೇರಳ ಅಡಿಕೆ ಮತ್ತು ಸಂಬಾರು ಬೆಳೆಗಳ ಉಪನಿರ್ದೇಶಕ ಬಾಬೂಲಾಲ್ ಮೀನ ಮತ್ತು ಪ್ರಮುಖ ವಿಜ್ಞಾನಿಗಳು ಉಪಸ್ಥಿತರಿದ್ದರು.

ಕಾಸರಗೋಡು ಸಿಪಿಸಿಆರ್‌ಐ ನಿರ್ದೇಶಕ ಡಾ| ಪಿ. ಚೌಡಪ್ಪ ಸ್ವಾಗತಿಸಿದರು. ವಿಟ್ಲ ಸಿಪಿಸಿಆರ್‌ಐ ಮುಖ್ಯಸ್ಥ ಡಾ| ಕೆ.ಎಸ್. ಆನಂದ ವಂದಿಸಿದರು. ವಿಟ್ಲ ಸಿಪಿಸಿಆರ್‌ಐ ವಿಜ್ಞಾನಿ ಡಾ| ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.

## ಬೆಳೆಗಾರರ ರಕ್ಷಣೆಗಾಗಿಯೇ ಕಾನೂನು ಖಾತೆ ಲಭಿಸಿತು

ಅಡಿಕೆ ಆರೋಗ್ಯಕ್ಕೆ ಪೂರಕ ಎಂದು ಚೆನ್ನೈ ಮೆಡಿಕಲ್ ಸೆಂಟರ್ ವರದಿ ನೀಡಿದೆ. ಸುಪ್ರೀಂ ಕೋರ್ಟ್‌ನಲ್ಲಿ 17ರಂದು ಅಡಿಕೆ ಪ್ರಕರಣ ಪ್ರಸ್ತಾಪವಾಗಲಿದ್ದು, ಹಾನಿಕಾರಕವಲ್ಲ ಎಂದು ಸಮರ್ಥಿಸಲು ಕ್ರಮಕೈಗೊಳ್ಳಲಾಗಿದೆ. ಅಡಿಕೆ ಬೆಳೆಗಾರರ ರಕ್ಷಣೆಗಾಗಿಯೇ ತನಗೆ ಕಾನೂನು ಖಾತೆ ಲಭಿಸಿರಬೇಕು. ಆ ಕಾರಣಕ್ಕೆ ತಾನು ಅಡಿಕೆ ಬೆಳೆಗಾರರ ಹಿತಾಸಕ್ತಿಗೆ ಬದ್ಧನಾಗಿದ್ದೇನೆ. ರಬ್ಬರ್ ಧಾರಣೆ ಕುಸಿತ ತಡೆಗಟ್ಟಲು ಆಮದು ಸುಂಕ ಏರಿಸುವ ಕ್ರಮ ಕೈಗೊಳ್ಳುವ ಹಾಗೂ ಅದನ್ನು ಕೇಂದ್ರ ಪರಿಶೀಲಿಸಲಿದೆ ಎಂದು ಸಚಿವ ಡಿ.ವಿ. ಎಸ್. ಅವರು ಭರವಸೆ ನೀಡಿದರು.